# ಹೊಳೆನರಸೀಪುರದ ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ.

**ಸಿ.ಸಿ.ನಂಃ 642/18**

| | | |
|---|---|---|
| **ಸಾಕ್ಷಿಯ ಹೆಸರು** | ಃ ಶಿವಣ್ಣ ಅಲಿಯಾಸ್ ಶಿವಾನಂದ | **ಸಿ.ಡಬ್ಲ್ಯೂ ಃ 2** |
| **ತಂದೆಯ ಹೆಸರು** | ಃ ಜವರಯ್ಯ | **ಪಿ.ಡಬ್ಲ್ಯೂ ಃ 2** |
| **ವಯಸ್ಸು** | ಃ 53 ವರ್ಷ | **ಪ್ರಮಾಣೀಕರಿಸಿದ ತಾಃ 27.02.2020** |
| **ವೃತ್ತಿ** | ಃ ಎ.ಸಿ. ಜೀಪ್ ಚಾಲಕ, ಎ.ಸಿ. ಕಚೇರಿ ಉಪವಿಭಾಗ, ಹಾಸನ, | |
| **ವಾಸ** | ಃ ಹಾಸನ. | |

**ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ ಯವರಿಂದ**

ನಾನು 2011 ರಿಂದ ಹಾಸನದ ಉಪವಿಭಾಗದಲ್ಲಿ ಸಹಾಯಕ ಉಪ ಆಯುಕ್ತರ ಕಚೇರಿಯಲ್ಲಿ ಜೀಪ್ ಚಾಲಕನಾಗಿ ಕರ್ತವ್ಯ ಮಾಡುತ್ತಿದ್ದೇನೆ.

ದಿನಾಂಕ 01.04.2016 ರಂದು ಹೊಳೆನರಸೀಪುರ ತಾ, ಹಳೇಕೋಟೆ ಹೋ, ಸಿಗರನಹಳ್ಳಿ ಗ್ರಾಮದಲ್ಲಿ ಜಾತ್ರೆ ಇತ್ತು. ಅದರ ಮುಂಜಾಗ್ರತಾ ಕ್ರಮವಾಗಿ ದಿಃ 01.04.2016 ರಂದು ಪರಿಶೀಲನೆ ಮಾಡಲೆಂದು ಚಾಸಾ 1 ರವರು ಸಿಗರನಹಳ್ಳಿ ಗ್ರಾಮಕ್ಕೆ ಹೋಗಿದ್ದರು. ನಾನು ಆ ದಿನ ಜೀಪನ್ನು ಚಾಲನೆ ಮಾಡಿಕೊಂಡು ಸಿಗರನಹಳ್ಳಿಗೆ ಹೋಗಿದ್ದೆನು. ಸ್ಥಳದಲ್ಲಿ ಚಾಸಾ 1 ಮತ್ತು ತಹಸೀಲ್ದಾರರು ಹಾಗೂ ಅಧಿಕಾರಿಗಳು ಇದ್ದರು. ಆ ಸಮಯದಲ್ಲಿ ಎಸ್.ಸಿ. ಜನಾಂಗ ಮತ್ತು ಗೌಡ ಜನಾಂಗದ ನಡುವೆ ಮೊದಲೇ ಸಂಘರ್ಷ ಇತ್ತು. ಎಸ್.ಸಿ. ಜನಾಂಗದವರನ್ನು ದೇವಸ್ಥಾನದ ಒಳಗೆ ಹೋಗಲು ಚಾಸಾ 1 ರವರು ಅನುಮತಿ ನೀಡಿದರು. ಇದರಿಂದ ಒಕ್ಕಲಿಗ ಜನಾಂಗದ ಗುಂಪಿನವರು ನೀವು ಎಸ್.ಸಿ. ಜನಾಂಗದವರನ್ನು ದೇವಸ್ಥಾನದ ಒಳಗೆ ಹೋಗಲು ಅನುಮತಿ ನೀಡಿರುವುದರಿಂದ ಇನ್ನು 6 ತಿಂಗಳು ನಾವು ಜಾತ್ರೆ ಮಾಡಲು ಸಾಧ್ಯವಿಲ್ಲ ಎಂದು ಚಾಸಾ 1 ಮತ್ತು ಇತರ ಅಧಿಕಾರಿಗಳನ್ನು ಉದ್ದೇಶಿಸಿ ಕೆಟ್ಟ ಕೆಟ್ಟ ಶಬ್ದಗಳಿಂದ ಬೈಯಲು ಪ್ರಾರಂಭಿಸಿದರು. ಆಗ ಸಮಯ 12.30 ಆಗಿತ್ತು. ಚಾಸಾ 1 ರವರು ಪೊಲೀಸರನ್ನು ಸ್ಥಳಕ್ಕೆ ಕರೆಸಿದರು. ಚಾಸಾ 1 ಮತ್ತು ಅಧಿಕಾರಿಗಳ ಮೇಲೆ ಕಲ್ಲುಗಳನ್ನು ಎಸೆದರು. ನಾನು ಸ್ಥಳದಲ್ಲಿ ಇದ್ದ ಚಾಸಾ 1 ರವರು ಹೈ ಪ್ಯಾಡ್ ನಿಂದ ಸದರಿ ದೃಶ್ಯವನ್ನು ವಿಡಿಯೋ ಮಾಡುತ್ತಿದ್ದನು. ನನಗೆ ಸ್ಥಳದಲ್ಲಿದ್ದ ಒಂದು ಗುಂಪಿನವರು ನನ್ನ ಹೈ ಪ್ಯಾಡ್ ನ್ನು ಕಿತ್ತುಕೊಂಡು ಚಚ್ಚಿ ಹಾಕಿದರು. ನನಗೂ ಹಲ್ಲೆ ಮಾಡಿದರು. ಚಾಸಾ 1 ಮತ್ತು ಇತರ ಅಧಿಕಾರಿಗಳಿಗೂ ಗುಂಪಿನಲ್ಲಿದ್ದ ಸದಸ್ಯರು ಅವಾಚ್ಯ ಶಬ್ದಗಳಿಂದ ಬೈಯುತ್ತಾ ದೈಹಿಕ ಹಲ್ಲೆ ಮಾಡಿದರು. ಸ್ಥಳಕ್ಕೆ ಬಂದ ಪೊಲೀಸರು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ರಕ್ಷಣೆಯನ್ನು ಕೊಟ್ಟು ಸರ್ಕಾರಿ ಶಾಲೆಯಲ್ಲಿ ಉಳಿಯಲು ಅವಕಾಶ ಮಾಡಿ ಕೊಟ್ಟರು. 10 ಜನರ ಗುಂಪಿನಲ್ಲಿ ಬಂದ ಸದಸ್ಯರು ನನ್ನ ಕೈಯಲ್ಲಿದ್ದ ಹೈ ಪ್ಯಾಡ್ ನ್ನು ಕಿತ್ತುಕೊಂಡರು. ನಂತರ ಚಾಸಾ 1 ರವರು ತಮ್ಮ ಕರ್ತವ್ಯವನ್ನು ಮಾಡಿದರು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ಸಾಕ್ಷಿ ತನ್ನದೆಂದು ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿ.ಪಿ. 2 ಸಾಕ್ಷಿಯ ಸಹಿಯನ್ನು ನಿ.ಪಿ. 2 ಎ ಎಂದು ಗುರುತಿಸಿಕೊಳ್ಳಲಾಯಿತು. ದಿಃ

01.04.2016 ರಂದು ಗಲಾಟೆಯಾದ ವಿಚಾರಕ್ಕಾಗಿ ನಿ.ಪಿ. 2 ಕ್ಕೆ ಸಿಗರನಹಳ್ಳಿ ಗ್ರಾಮದಲ್ಲಿ ಸಹಿ ಮಾಡಿದ್ದೇನೆ. ನಿ.ಪಿ. 2 ಕ್ಕೆ ಸಂಜೆ 2 ರಿಂದ 3 ಗಂಟೆ ಸಮಯದಲ್ಲಿ ಸಹಿ ಮಾಡಿದ್ದೇನೆ. ನನ್ನ ಜೊತೆ ನಿ.ಪಿ. 2 ಕ್ಕೆ ಬೇರೆ ಯಾರೂ ಸಹಿ ಮಾಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಈಗ ಗುರುತಿಸಲು ಸಾಧ್ಯವಿಲ್ಲ. ಮು.ಮಾ 10 ನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಮು.ಮಾ 1 ರಿಂದ 9 ನ್ನು ಸಾಕ್ಷಿ ಗುರುತಿಸಿರುವುದಿಲ್ಲ.

<u>(ಮಾನ್ಯ ಎ.ಪಿ.ಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)</u>

<u>ಪಾಟೀಸವಾಲು :- ಮಾನ್ಯ ಎ.ಪಿ.ಪಿ ರವರಿಂದ</u>

ದಿಃ 01.04.2016 ರಂದು ಚಾಸಾ 1 ಮತ್ತು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ತಮ್ಮ ಸರ್ಕಾರಿ ಕರ್ತವ್ಯವನ್ನು ನಿರ್ವಹಿಸಲು ತೊಂದರೆ ಆಯಿತು ಎಂದರೆ ಸರಿ. ದಿಃ 02.04.2016 ರಂದು ಪೊಲೀಸರು ಕೃತ್ಯ ಸ್ಥಳದ ಮಹಜರ್ ಮಾಡಲು ಸಿಗರನಹಳ್ಳಿ ಗ್ರಾಮಕ್ಕೆ ಬಂದಿದ್ದರು ಎಂದರೆ ಸರಿ. ನಾನೇ ಪೊಲೀಸರಿಗೆ ಕೃತ್ಯ ಸ್ಥಳವನ್ನು ತೋರಿಸಿದೆನು ಎಂದರೆ ಸರಿ. ಆ ಸಮಯದಲ್ಲಿ ಹೈ ಪ್ಯಾಡ್‌ನ್ನು ವಶಪಡಿಸಿಕೊಂಡರು ಎಂದರೆ ಸರಿ. ಮತ್ತು 1 ರಿಂದ 9 ಕಲ್ಲುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ. 2 ನ್ನು 4.30 ರಿಂದ 5.30 ರವರೆಗೂ ಮಾಡಿದರು ಎಂದರೆ ಸರಿ. ನಿ.ಪಿ. 2 ಕ್ಕೆ ನನ್ನ ಸಮಕ್ಷಮ ಚಾಸಾ 9 ಮತ್ತು 10 ರವರು ಸಹಿ ಮತ್ತು ಹೆಬ್ಬೆಟ್ಟು ಹಾಕಿದ್ದಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಪೊಲೀಸ್ ಠಾಣೆಯಲ್ಲಿ ನಾನು ಗುರುತು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳನ್ನು ಈಗಲೂ ಗುರುತಿಸಲು ಸಾಧ್ಯವಿದ್ದರೂ ಗುರುತಿಸಲು ಆಗುತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳನ್ನು ಈ ಪ್ರಕರಣದಿಂದ ಬಚಾವ್ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಶ್ರೀ ಡಿ.ಬಿ.ಡಿ ವಕೀಲರಿಂದ

ನಾನು 24 ವರ್ಷ 5 ತಿಂಗಳಿನಿಂದ ಜೀಪ್ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ದಿಃ 01.04.2016 ರಂದು ಸಿಗರನಹಳ್ಳಿ ಗ್ರಾಮಕ್ಕೆ ಜಾತ್ರೆಗಾಗಿ ಮದ್ಯಾಹ್ನ ಸುಮಾರು 12 ಗಂಟೆಗೆ ಹೋಗಿದ್ದೆವು. ಸಿಗರನಹಳ್ಳಿ ಗ್ರಾಮದಲ್ಲಿ ಆ ದಿನ 25 ಸಾವಿರದಿಂದ 30 ಸಾವಿರ ಜನರು ಇದ್ದರು. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಇಂದೇ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿ. ಅವರುಗಳ ಹೆಸರುಗಳನ್ನು ನನ್ನಿಂದ ಹೇಳಲು ಆಗುವುದಿಲ್ಲ. ಘಟನೆಯ ವಿಚಾರಕ್ಕಾಗಿ ನಾನು ಹೇಳಿಕೆ ಕೊಟ್ಟಿಲ್ಲ. ನಿ.ಪಿ.

2 ಕ್ಕೆ ಘಟನೆ ಆದ 15 ದಿನದ ನಂತರ ಕೃತ್ಯ ಸ್ಥಳದ ಬಳಿಗೆ ಸಹಿ ಮಾಡಿದ್ದೇನೆ. ನಿ.ಪಿ. 2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿ.

ಮರುವಿಚಾರಣೆ ಇರುವುದಿಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ.

ಜೆ.ಎಂ.ಎಫ್.ಸಿ, ಹೊಳೆನರಸೀಪುರ.